ಪಶುವೈದ್ಯಕೀಯ ಸೇವೆಗಳ ಇಲಾಖೆ, ಉಡುಪಿ ಜಿಲ್ಲೆ, ಉಡುಪಿ, ಅವರ ಆದೇಶ ಸಂ. ಉನಿಉ/ಎಡಬ್ಲ್ಯೂಬಿಐ/ಕಂಬಳ/2014–115, ದಿನಾಂಕ:14.11.2014 ರಂದು ಆದೇಶ ಹೊರಡಿಸಿರುತ್ತಾರೆ. ಸದರಿ ಕ್ರೀಡೆಯನ್ನು ಮುಂದುವರೆಸುವ ಯಾವುದೇ ಕ್ರಮ ಸರ್ಕಾರದ ಮುಂದೆ ಇರುವುದಿಲ್ಲ.

ಟೆಂಡರ್ ನಿಯಮಗಳಲ್ಲಿ ಅಮೂಲಾಗ್ರ ಬದಲಾವಣೆ

65(81); ಶ್ರೀ ಎನ್.ಎ. ಹ್ಯಾರೀಸ್ (ಶಾಂತಿನಗರ)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಗುಣಮಟ್ಟ ಮತ್ತು ಸಕಾಲದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವ ಕುರಿತು ಗುತ್ತಿಗೆದಾರರುಗಳಿಗೆ ಅನ್ವಯಿಸುವ ಕಟ್ಟುನಿಟ್ಟಿನ ನಿಯಮ ಮತ್ತು ಅರ್ಹತೆಗಳ ಕುರಿತು ಸರ್ಕಾರ ಅನುಸರಿಸುತ್ತಿರುವ ನೀತಿ ನಿಯಮಗಳೇನು? ಅವುಗಳನ್ನು ಪರಿಪೂರ್ಣವಾಗಿ ಪಾಲಿಸಲಾಗುತ್ತಿದೆಯೇ?

ಆ) ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನೀಡುವ ಮುನ್ನ ವಿಧಿಸಿರುವ ನಿಯಮಗಳನ್ನು ಪಾಲನೆ ಮಾಡದಿರುವವರನ್ನು ಅನರ್ಹಗೊಳಿಸಿಸುವ ಹಾಗೂ ಅಂತಹವರನ್ನು ನಿರ್ಬಂಧಗೊಳಿಸುವ ಕುರಿತು ಸರ್ಕಾರದ ಕಟ್ಟುನಿಟ್ಟಿನ ಕ್ರಮಗಳೇನು;

ಇ) ಕಾನೂನು ನೀತಿ ನಿಯಮಗಳನ್ನು ಅನುಸರಿಸದ ಮತ್ತು ಗುಣಮಟ್ಟದ ಕಾಮಗಾರಿಗಳನ್ನು ಮಾಡದೆ ಹಣ ಪಡೆಯುವ ಗುತ್ತಿಗೆದಾರರನ್ನು ತೆಗೆದು ಹಾಕುವ ಕುರಿತು ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಇರುವ ಅಧಿಕಾರ ವ್ಯಾಪ್ತಿಗಳೇನು;

ಈ) ಚರಂಡಿ ಕಾಮಗಾರಿಗಳು ಹಾಗೂ ರಸ್ತೆಯ ಡಾಂಬರೀಕರಣದಲ್ಲಿನ ಕಳಪೆ ಕಾಮಗಾರಿಗಳನ್ನು ಗುರುತಿಸಿ ಅಂತಹ ಗುತ್ತಿಗೆದಾರರನ್ನು

ಅನರ್ಹಗೊಳಿಸುವ ಮತ್ತು ಅರ್ಹರನ್ನು ಗುರುತಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವ ಕುರಿತಾದ ಸರ್ಕಾರದ ಕ್ರಮಮಗಳೇನು?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು)

ಅ) ಪಾಲಿಕೆಯ ವ್ಯಾಪ್ತಿಯಲ್ಲಿ ಕಾಮಗಾರಿಗಳ ಗುಣಮಟ್ಟ ಹಾಗೂ ಸಕಾಲದಲ್ಲಿ ಪೂರ್ಣಗೊಳಿಸುವ ಕುರಿತು ಪಾಲಿಕೆಯ ಎಲ್ಲಾ ಎಂಟು ವಲಯಗಳ ವ್ಯಾಪ್ತಿಯಲ್ಲಿ ನಿರ್ವಹಿಸುವ ಕಾಮಗಾರಿಗಳಿಗೆ ಪಾಲಿಕೆಯಿಂದ ಎನ್.ಎ.ಬಿ.ಎಲ್ ನಿಂದ ಅರ್ಹತೆಯೊಂದಿಗೆ ನೊಂದಾಯಿತ ಗುಣನಿಯಂತ್ರಣ ಪ್ರಯೋಗ ಶಾಲೆಗಳಿಂದ ಗುಣನಿಯಂತ್ರಣ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಟರ್ನ್‌ಕೀ ಯೋಜನೆಗಳಿಗೆ ಸಮಾಲೋಚಕರನ್ನು ನೇಮಿಸಿಕೊಂಡು ಗುಣನಿಯಂತ್ರಣ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

ಈ ಮೇಲ್ಕಾಣಿಸಿದ ಗುಣನಿಯಂತ್ರಣ ಪ್ರಯೋಗ ಶಾಲೆ ಸಂಸ್ಥೆಗಳು ಹಾಗೂ ಯೋಜನಾ ಸಮಾಲೋಚಕರಿಗೆ ಗುಣನಿಯಂತ್ರಣ ಪರೀಕ್ಷೆ ನಡೆಸಲು ಅವರ ಟೆಂಡರ್ ಕರಾರಿನಲ್ಲಿ ಕಟ್ಟುನಿಟ್ಟಿನ ನಿಯಮ ಮತ್ತು ಅರ್ಹತೆಯ ಬಗ್ಗೆ ಐ.ಎಸ್.ಕೋಡ್ ಹಾಗೂ ಎಂ.ಒ.ಆರ್.ಟಿ.ಹೆಚ್ ನಲ್ಲಿ ತಿಳಿಸಿದಂತೆ ಪ್ರಯೋಗಗಳನ್ನು ನಡೆಸಿ ಸದರಿಯವರು ನೀಡಿರುವ ಫಲಿತಾಂಶದ ವರದಿಯಂತೆ ಕಾಮಗಾರಿಯ ಅರ್ಹತೆಯನ್ನು ತುಲನೆ ಮಾಡಲಾಗುವುದು. ಕಾಮಗಾರಿಗಳ ಗುಣನಿಯಂತ್ರಣಕ್ಕೆ ಸಂಬಂಧಿಸಿದಂತೆ ಎಲ್ಲಾ ನಿಯಮಗಳನ್ನು ತಾಂತ್ರಿಕವಾಗಿ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ.

ಸಕಾಲದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಟೆಂಡರ್ ಕರಾರಿನಲ್ಲಿ ಗುತ್ತಿಗೆ ಅವಧಿಯನ್ನು ಸೂಚಿಸಲಾಗಿರುತ್ತದೆ. ಗುತ್ತಿಗೆದಾರರಿಂದ ಕಾಮಗಾರಿಯ ಪ್ರಗತಿಯು ವಿಳಂಬವಾಗಿದ್ದಲ್ಲಿ ಟೆಂಡರ್ ಕರಾರಿನಂತೆ ಗುತ್ತಿಗೆದಾರರಿಗೆ ದಂಡ ವಿಧಿಸಲಾಗುವುದು

ಅಥವಾ ಟೆಂಡರ್‌ನ್ನು ಗುತ್ತಿಗೆದಾರರ ಗುತ್ತಿಗೆಯನ್ನು Risk and cost ಆಧಾರದ ಮೇಲೆ ರದ್ದುಪಡಿಸಲಾಗುವುದು.

ಆ) ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನೀಡುವ ಮುನ್ನ ಒಪ್ಪಂದದ ಕರಾರು ಪತ್ರದಲ್ಲಿ ವಿಧಿಸಿರುವ ನಿಯಮಗಳನ್ನು ಪಾಲನೆ ಮಾಡಬೇಕಾಗಿರುತ್ತದೆ. ತಪ್ಪಿದ್ದಲ್ಲಿ, ಕರಾರು ಪತ್ರದ ರೀತ್ಯಾ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಇ) ಗುತ್ತಿಗೆದಾರರು ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ವಿಳಂಬ ಮಾಡುವ ಸಂದರ್ಭದಲ್ಲಿ ನೋಟೀಸ್ ಜಾರಿಗೊಳಿಸಿ, ನಿಯಮಾನುಸಾರ ಇ.ಎಂ.ಡಿ.ಯನ್ನು ಮುಟ್ಟುಗೋಲು ಮಾಡಿಕೊಂಡು ಟೆಂಡರ್ ರದ್ದುಗೊಳಿಸಲಾಗುವುದು. ಮುಂದುವರೆದಂತೆ, ಗುಣಮಟ್ಟವನ್ನು ಕಾಪಾಡುವ ನಿಟ್ಟಿನಲ್ಲಿ ಕ್ರಮವಹಿಸದ ಗುತ್ತಿಗೆದಾರರ ಪರವಾನಗಿಯನ್ನು ಸಕ್ಷಮ ಪ್ರಾಧಿಕಾರದಿಂದ ರದ್ದುಗೊಳಿಸಲಾಗುತ್ತದೆ.

ಈ) ಚರಂಡಿ, ಡಾಂಬರೀಕರಣ ಕಾಮಗಾರಿಗಳು ಹಾಗೂ ಇತರೇ ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ವಹಿಸಿಕೊಡುವ ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ವಹಿಸಿಕೊಡುವ ಮುನ್ನವೇ ಈ ಹಿಂದೆ ಗುತ್ತಿಗೆದಾರರು ಯಾವುದೇ ಕಳಪೆ ಕಾಮಗಾರಿಗಳನ್ನು ನಡೆಸಿದ್ದಲ್ಲಿ ಹಾಗೂ ಅರ್ಹರನ್ನು ಗುರುತಿಸಲು Standard Tender Document ನ Bid Capacity ತೀರ್ಮಾನಿಸುವ ಸಮಯದಲ್ಲಿ ಗಣನೆಗೆ ತೆಗೆದುಕೊಂಡು ಗುತ್ತಿಗೆದಾರರನ್ನು ಅರ್ಹ ಅಥವಾ ಅನರ್ಹಗೊಳಿಸಬೇಕೆಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಅನರ್ಹಗೊಂಡ ಗುತ್ತಿಗೆದಾರರಿಗೆ ಟೆಂಡರ್‌ನ ಭಾಗವಾದ ಆರ್ಥಿಕ ಬಿಡ್‌ನಲ್ಲಿ ಭಾಗವಹಿಸಲು ತಡೆಹಿಡಿಯಲಾಗುವುದು.